ಗಣಕ ಯಂತ್ರ ಶಾಖೆ

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 232
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
( ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 13-09-2021
ಉತ್ತರಿಸುವ ಸಚಿವರು : ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ನಾಡಿನ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಗಿರಿಜನ ಸಮುದಾಯವನ್ನು ವಿಶೇಷವಾಗಿ ಸಮಾಜದ ಮುಖ್ಯವಾಹಿನಿಗೆ ಕರೆತರುವ ಸದುದ್ದೇಶದಿಂದ ಸರ್ಕಾರವು ಗಿರಿಜನ ಉಪಯೋಜನೆಯಡಿಯಲ್ಲಿ ವಿಶೇಷ ನಿಧಿಯನ್ನು ಸ್ಥಾಪಿಸಿ, ಪ್ರತ್ಯೇಕವಾಗಿ ಬಿಡುಗಡೆಯಾದ ಅನುದಾನ ಎಷ್ಟು; (ವಿವರ ನೀಡುವುದು) | ಗಿರಿಜನ ಉಪಯೋಜನೆಯಡಿ ಪ್ರತ್ಯೇಕವಾದ ವಿಶೇಷ ನಿಧಿ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಆದರೆ ಪ್ರತಿವರ್ಷದಂತೆ ಇಲಾಖೆಯ ಗಿರಿಜನ ಉಪಯೋಜನೆಯಡಿ 2021-22ನೇ ಸಾಲಿನ ಆಯವ್ಯಯದಲ್ಲಿ ರೂ.3.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ. (ಅನುಬಂಧ -01) |
| ಆ. | ಪರಿಶಿಷ್ಟ ಪಂಗಡದ (ಎಸ್.ಟಿ) ಕಲಾವಿದರು ಮತ್ತು ಸಂಸ್ಥೆಗಳು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಅವಕಾಶಗಳನ್ನು ಮತ್ತು ಆರ್ಥಿಕ ನೆರವನ್ನು ಒದಗಿಸಲಾಗುತ್ತಿದೆಯೇ; (ಒದಗಿಸಿದ್ದಲ್ಲಿ, ವಿವರ ನೀಡುವುದು) | ಹೌದು.<br><br>ದಿನಾಂಕ:02.07.2021ರಂದು ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದನೆಯಾದ 2021-22ನೇ ಸಾಲಿನ ಕ್ರಿಯಾಯೋಜನೆಯಂತೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |
| ಇ. | ಜನಪದ ತರಬೇತಿ ಕಾರ್ಯಕ್ರಮಗಳಿಗೆ ಗುರು-ಶಿಷ್ಯ ಪರಂಪರೆಯ ಅಡಿಯಲ್ಲಿ ಗುರುಕುಲ ಮಾದರಿಯ ಶಿಕ್ಷಣಕ್ಕೆ ಎಷ್ಟು ಅನುದಾನ ಮೀಸಲಿಡಲಾಗಿದೆ; (ವಿವರ ನೀಡುವುದು) | ದಿನಾಂಕ:02.07.2021ರಂದು ನಡೆದ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದನೆಯಾದ 2021-22ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಗುರುಶಿಷ್ಯ ಪರಂಪರೆ ಯೋಜನೆಯನ್ನು ಕೈಬಿಡಲಾಗಿದೆ. |
| ಈ. | ಕಳೆದ 5 ವರ್ಷಗಳಿಂದ ಕಲಾವಿದರಿಗೆ ವಾರ್ಷಿಕ ವೇತನ ನೀಡಲಾಗುತ್ತಿದೆಯೇ; ನೀಡಿದ್ದಲ್ಲಿ, ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು? | ವಾರ್ಷಿಕ ವೇತನ ನೀಡುವ ಯೋಜನೆಯು ಜಾರಿಯಲ್ಲಿರುವುದಿಲ್ಲ. |

ಸಂಖ್ಯೆ: ಕಸಂವಾ 49 ಕವಿಸ 2021

(ವಿ.ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಅನುಬಂಧ - 2
SCP/TSP

## ಸಮಾಜ ಕಲ್ಯಾಣ ಇಲಾಖೆ

ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಅಧ್ಯಕ್ಷರು, ರಾಜ್ಯ ಅನುಸೂಚಿತ ಜಾತಿಗಳ/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ-2013 ರಂತೆ ದಿನಾಂಕ 02.07.2021 ರಂದು ನಡೆದ ಸಭೆಯ ನಡವಳಿಗಳು.

ಸ್ಥಳ: ಕೊಠಡಿ ಸಂಖ್ಯೆ 334, 3ನೇ ಮಹಡಿ ಸಮ್ಮೇಳನ ಸಭಾಂಗಣ ವಿಧಾನಸೌಧ, ಬೆಂಗಳೂರು

### ಸಭೆಗೆ ಹಾಜರಾದ ಸದಸ್ಯರುಗಳ ಮತ್ತು ಅಧಿಕಾರಿಗಳ ವಿವರ

| | ಹೆಸರು | ಪದನಾಮ |
|---|---|---|
| 1 | ಶ್ರೀ ಬಿ.ಎಸ್. ಯಡಿಯೂರಪ್ಪ<br>ಸನ್ಮಾನ್ಯ ಮುಖ್ಯಮಂತ್ರಿಗಳು | ಅಧ್ಯಕ್ಷರು |
| 2 | ಶ್ರೀ ಬಿ.ಶ್ರೀರಾಮುಲು<br>ಮಾನ್ಯ ಸಮಾಜ ಕಲ್ಯಾಣ ಸಚಿವರು<br>ವಿಧಾನಸೌಧ, ಬೆಂಗಳೂರು | ಉಪಾಧ್ಯಕ್ಷರು |
| 3 | ಶ್ರೀ ಗೋವಿಂದ ಎಂ ಕಾರಜೋಳ<br>ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು | ವಿಶೇಷ ಆಹ್ವಾನಿತರು |
| 4 | ಶ್ರೀ ಲಕ್ಷ್ಮಣ ಸಂಗಪ್ಪ ಸವದಿ<br>ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು | ವಿಶೇಷ ಆಹ್ವಾನಿತರು |
| 5 | ಶ್ರೀ ಕೆ.ಎಸ್. ಈಶ್ವರಪ್ಪ,<br>ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | ಸದಸ್ಯರು |
| 6 | ಡಾ|| ಜಿ.ಉಮೇಶ ಜಾಧವ್<br>ಮಾನ್ಯ ಲೋಕಸಭಾ ಸದಸ್ಯರು ಕಲಬುರಗಿ | ಸದಸ್ಯರು |
| 7 | ಶ್ರೀ ಐಹೊಳೆ ದುರ್ಯೋಧನ<br>ಮಾನ್ಯ ಶಾಸಕರು, ರಾಯಭಾಗ ವಿಧಾನಸಭಾ ಕ್ಷೇತ್ರ | ಸದಸ್ಯರು |
| 8 | ಶ್ರೀ ನರಸಿಂಹ ನಾಯಕ್ (ರಾಜುಗೌಡ)<br>ಮಾನ್ಯ ಶಾಸಕರು, ಸುರಪುರ ವಿಧಾನಸಭಾ ಕ್ಷೇತ್ರ | ಸದಸ್ಯರು |
| 9 | ಶ್ರೀ ಎನ್ ಮಹೇಶ್<br>ಮಾನ್ಯ ಶಾಸಕರು, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ | ಸದಸ್ಯರು |
| 10 | ಶ್ರೀ ಪಿ. ರವಿ ಕುಮಾರ್, ಭಾ.ಆ.ಸೇ.<br>ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ | ಸದಸ್ಯರು |
| 11 | ಶ್ರೀಮತಿ ವಂದಿತಾ ಶರ್ಮಾ, ಭಾ.ಆ.ಸೇ.<br>ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಸದಸ್ಯರು |
| 12 | ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ.<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು |
| 13 | ಡಾ. ಶಾಲಿನಿ ರಜನೀಶ್, ಭಾ.ಆ.ಸೇ.<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ | ಸದಸ್ಯರು |

| | ಹೆಸರು | ಪದನಾಮ |
|---|---|---|
| | ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. | |
| 14 | ಡಾ|| ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿ |
| 15 | ಡಾ. ಇ. ವೆಂಕಟಯ್ಯ, ಭಾ.ಆ.ಸೇ.(ನಿ) | ನೋಡಲ್ ಏಜೆನ್ಸಿ ಸಲಹೆಗಾರರು |
| 16 | ಶ್ರೀ ಲಕ್ಷ್ಮಿ ನಾರಾಯಣ, ಭಾ.ಆ.ಸೇ(ನಿ) | ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು |
| 17 | ಉಪ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರುವ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು | (ಹಾಜರಾದ ಅಧಿಕಾರಿಗಳ ಪಟ್ಟಿ ಲಗತ್ತಿಸಿದೆ) |

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ರಾಜ್ಯ ಪರಿಷತ್ತಿನ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳು,ಉಪಾಧ್ಯಕ್ಷರಾದ ಮಾನ್ಯ ಸಮಾಜ ಕಲ್ಯಾಣ ಸಚಿವರು, ಸದಸ್ಯರಾದ ಮಾನ್ಯ ಸಚಿವರುಗಳನ್ನು ಮತ್ತು ರಾಜ್ಯ ಪರಿಷತ್ತಿನ ಎಲ್ಲಾ ನಾಮನಿರ್ದೇಶಿತ ಮಾನ್ಯ ಸದಸ್ಯರುಗಳು ಇವರೆಲ್ಲರನ್ನೂ ಸಭೆಗೆ ಸ್ವಾಗತಿಸಿದರು.ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ಸಭೆಗೆ ಹಾಜರಾದ ಎಲ್ಲಾ ಇಲಾಖಾ ಮುಖ್ಯಸ್ಥರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ಸಭೆ ನಡೆಸಲು ಅನುಮೋದನೆ ಪಡೆಯಲಾಯಿತು.

ನಂತರ ಮಾನ್ಯ ಸಮಾಜ ಕಲ್ಯಾಣ ಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ 2020-21 ನೇ ಸಾಲಿನಲ್ಲಿ 95% ಪ್ರಗತಿಯನ್ನು ಸಾಧಿಸಿದ ಬಗ್ಗೆ ಎಲ್ಲಾ ಅನುಷ್ಠಾನಾಧಿಕಾರಿಗಳನ್ನು ಅಭಿನಂದಿಸಿದರು. ಪ.ಜಾತಿ/ಪ.ಪಂಗಡದವರ ಅಭಿವೃದ್ಧಿಗೆ 2021-22 ನೇ ಸಾಲಿನಲ್ಲಿ ಒದಗಿಸಿರುವ ರೂ.26,005.01 ಕೋಟಿ ಅನುದಾನವನ್ನು ಈಗಾಗಲೇ ಎಲ್ಲಾ ಇಲಾಖೆಗಳಿಗೆ ಹಂಚಿಕೆ ಮಾಡಿ ಮತ್ತು ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಬಗ್ಗೆ ನೋಡಲ್ ಏಜೆನ್ಸಿ ಸಭೆಯಲ್ಲಿ ಚರ್ಚಿಸಿ ಶಿಫಾರಸ್ಸುಗಳೊಂದಿಗೆ ರಾಜ್ಯ ಅಭಿವೃದ್ಧಿ ಪರಿಷತ್ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಇಂದಿನ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಕಾರ್ಯಕ್ರಮಗಳ ಬಗ್ಗೆ ಏನಾದರೂ ಮಾರ್ಪಾಡು/ಸೇರ್ಪಡೆ ಇದ್ದಲ್ಲಿ, ಆ ಬಗ್ಗೆ ಚರ್ಚಿಸಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕ್ರಿಯಾ ಯೋಜನೆಗೆ ರಾಜ್ಯ ಅಭಿವೃದ್ಧಿ ಪರಿಷತ್ ಅನುಮೋದನೆ ನೀಡಲು ಕೋರಿದರು.

ನಂತರ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು 2020-21 ನೇ ಸಾಲಿನ ಪ್ರಗತಿ ವಿವರ, 2021-22 ನೇ ಸಾಲಿನ ಆಯವ್ಯಯ ಹಾಗೂ ಅನುದಾನ ಹಂಚಿಕೆ ಮಾಡಿರುವ ಪ್ರಮುಖ ಇಲಾಖೆಗಳ ವಿವರವನ್ನು ಸಭೆಯ ಗಮನಕ್ಕೆ ತಂದರು. ವಿವರ ಈ ಕೆಳಗಿನಂತಿದೆ.

1. 2020-21ನೇ ಸಾಲಿನ ಪ್ರಗತಿ ವಿವರ

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ಹಂಚಿಕೆ | ವೆಚ್ಚ | ಶೇಕಡಾ ಪ್ರಗತಿ |
|---|---|---|---|
| SCSP | 18131.12 | 17352.45 | 95.71 |
| TSP | 7814.78 | 7294.54 | 93.34 |
| ಒಟ್ಟು | 25945.90 | 24646.99 | 94.99 |

2020-21ನೇ ಸಾಲಿನಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯಡಿ ಒಟ್ಟಾರೆ ಹಂಚಿಕೆಗೆ 95% ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಇಲಾಖಾವಾರು ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು ಕರಡು ಕ್ರಿಯಾ ಯೋಜನೆಯಲ್ಲಿ ಒದಗಿಸಲಾಗಿದೆ.

2. 2021-22ನೇ ಸಾಲಿನ ಆಯವ್ಯಯದ ವಿವರ

(ರೂ. ಕೋಟಿಗಳಲ್ಲಿ)

| ಕ್ರ ಸಂ | ವಲಯ | ವಿವರ | ಹಂಚಿಕೆ | | |
|---|---|---|---|---|---|
| | | | ಎಸ್‌ಸಿಎಸ್‌ಪಿ | ಟಿಎಸ್‌ಪಿ | ಒಟ್ಟು |
| 1 | ರಾಜ್ಯ | ರಾಜಸ್ವ | 10091.71 | 3847.35 | 13939.06 |
| | | ಬಂಡವಾಳ | 5411.98 | 2617.07 | 8029.05 |
| | | ಒಟ್ಟು | 15503.69 | 6464.42 | 21968.11 |
| 2 | ಜಿಲ್ಲಾ | ರಾಜಸ್ವ | 2827.84 | 1209.05 | 4036.89 |
| ಒಟ್ಟು | | | 18331.53 | 7673.47 | 26005.01 |

3. 2021-22ನೇ ಸಾಲಿನ ಕ್ರಿಯಾ ಯೋಜನೆಯ ವಿವರ

2021-22ನೇ ಸಾಲಿನ ಅನುದಾನಕ್ಕೆ ಅನುಗುಣವಾಗಿ ವಿವಿಧ ಇಲಾಖೆಗಳು ಸಲ್ಲಿಸಿರುವ ಕ್ರಿಯಾ ಯೋಜನೆಗಳನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 10-06-2021 ಮತ್ತು 11-06-2021 ರಂದು ನಡೆದ ನೋಡಲ್ ಏಜೆನ್ಸಿ ಸಭೆಗಳಲ್ಲಿ ಪರಿಶೀಲಿಸಿ ನೋಡಲ್ ಏಜೆನ್ಸಿ ಶಿಫಾರಸ್ಸಿನೊಂದಿಗೆ ಕ್ರಿಯಾ ಯೋಜನೆಗಳನ್ನು ರಾಜ್ಯ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಲಾಯಿತು.

ಪ್ರಮುಖ ಇಲಾಖೆಗಳ ಉಪಹಂಚಿಕೆ ವಿವರ:

1. ಸಮಾಜ ಕಲ್ಯಾಣ ಇಲಾಖೆ- 20.00% (ರೂ. 5,106.16 ಕೋಟಿಗಳು)
   ಪರಿಶಿಷ್ಟ ಜಾತಿಗಳ ಕಲ್ಯಾಣ-ರೂ. 3710.47 ಕೋಟಿ (14.26%)
   ಪರಿಶಿಷ್ಟ ಪಂಗಡಗಳ ಕಲ್ಯಾಣ-ರೂ. 1395.79 ಕೋಟಿ (5.36%)
2. ನೀರಾವರಿ ಮತ್ತು ಇಂಧನ ಇಲಾಖೆಗಳು: ರೂ. 4,342.15 ಕೋಟಿ (16.69%)
3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ – ರೂ.3134.00 ಕೋಟಿ (12.05%)
4. ನಗರಾಭಿವೃದ್ಧಿ – ರೂ. 1155.14 ಕೋಟಿಗಳು (4.44%)
5. ವಸತಿ – ರೂ. 1005.10 ಕೋಟಿ (3.87%) + ರೂ. 250.00 ಕೋಟಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಆಯವ್ಯಯದಲ್ಲಿ ನಿಗದಿಪಡಿಸಲಾಗಿದೆ.

6. ಲೋಕೋಪಯೋಗಿ – ರೂ.1170.29 ಕೋಟಿ (4.5%)

7. ಯೋಜನೆ ಮತ್ತು ಸಾಂಖ್ಯಿಕ – ರೂ.673.34 ಕೋಟಿ (2.59%)

8. ಕೃಷಿ ಮತ್ತು ಸಂಬಂಧಿಸಿದ ಇಲಾಖೆಗಳಿಗೆ – ರೂ.1410.30 ಕೋಟಿ (5.42%)

9. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ – ರೂ.1290.55 ಕೋಟಿ (5.96%)

10. ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ – ರೂ.1316.45 ಕೋಟಿ (5%)

11. ಸಾಮಾಜಿಕ/ಆಹಾರ ಭದ್ರತೆ – ಕಂದಾಯ/ಆಹಾರ ಮತ್ತು ನಾಗರಿಕ ಸರಬರಾಜು – ರೂ.3725.23 ಕೋಟಿ (14.33%)

12. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ – ರೂ. 800.62 ಕೋಟಿ (3.08%)

13. ಇತರೆ ಇಲಾಖೆಗಳಿಗೆ – ರೂ. 877.51 ಕೋಟಿ (3.38%)

ನಂತರ ಮಾನ್ಯ ಮುಖ್ಯಮಂತ್ರಿಗಳ ಅನುಮತಿಯೊಂದಿಗೆ ಕ್ರಿಯಾ ಯೋಜನೆಗಳ ಬಗ್ಗೆ ವಿವರವಾಗಿ ಚರ್ಚಿಸಲು ಪ್ರಾರಂಭಿಸಿ, 2021-22ನೇ ಸಾಲಿನಲ್ಲಿ ರಾಜ್ಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದ ಇಲಾಖಾವಾರು ಕ್ರಿಯಾ ಯೋಜನೆಗಳ ವಿವರವನ್ನು ಕೆಳಕಂಡಂತೆ ಸಭೆಯಲ್ಲಿ ಮಂಡಿಸಲಾಯಿತು.

1. ಕೃಷಿ ಇಲಾಖೆ

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ – ಎಸ್.ಸಿ.ಎಸ್.ಪಿ–ರೂ.596.21 ಕೋಟಿ, ಟಿ.ಎಸ್.ಪಿ– ರೂ.302.88 ಕೋಟಿ ಒಟ್ಟು ರೂ.899.09 ಕೋಟಿ.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

ಕೃಷಿ ಇಲಾಖೆಯಿಂದ ಯಂತ್ರೋಪಕರಣ/ಹನಿ ನೀರಾವರಿ ಘಟಕಗಳನ್ನು ಒದಗಿಸಲು 90% ಅಥವಾ ಗರಿಷ್ಟ ರೂ.1.00 ಲಕ್ಷ ಮತ್ತು ಟ್ರ್ಯಾಕ್ಟರ್‌ಗೆ ರೂ.3.00 ಲಕ್ಷ ಸಹಾಯಧನ ನೀಡುವುದನ್ನು ಮತ್ತು ಬಿತ್ತನೆ ಬೀಜ ವಿತರಿಸಲು ಸಹಾಯಧನವನ್ನು ಹಿಂದಿನ ವರ್ಷದಂತೆ ಮುಂದುವರೆಸಲು ತೀರ್ಮಾನಿಸಲಾಗಿದೆ.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೃಷಿ ಇಲಾಖೆ)

2. ತೋಟಗಾರಿಕೆ ಇಲಾಖೆ:

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ – ಎಸ್.ಸಿ.ಎಸ್.ಪಿ–ರೂ.109.04 ಕೋಟಿ, ಟಿ.ಎಸ್.ಪಿ– ರೂ.46.98 ಕೋಟಿ ಒಟ್ಟು ರೂ.156.02 ಕೋಟಿ.

ತೋಟಗಾರಿಕೆ ಇಲಾಖೆಯಿಂದ ಯಂತ್ರೋಪಕರಣ/ಹನಿ ನೀರಾವರಿ ಘಟಕಗಳನ್ನು ಒದಗಿಸಲು 90% ಅಥವಾ ಗರಿಷ್ಟ ರೂ.1.00 ಲಕ್ಷ ಮತ್ತು ಟ್ರ್ಯಾಕ್ಟರ್‌ಗೆ ರೂ.3.00 ಲಕ್ಷ ಸಹಾಯಧನ ನೀಡುವುದನ್ನು ಮುಂದುವರೆಸಲಾಗಿದೆ. ವಿವಿಧ ಕಾರ್ಯಕ್ರಮಗಳಿಗೆ ಅನುಮೋದನೆ ನೀಡಲಾಗಿದೆ.

## 2021-22ನೇ ಸಾಲಿನ SCSP / TSP ಕಾರ್ಯಕ್ರಮಗಳ ಕ್ರಿಯಾ ಯೋಜನೆ

## Scheme-wise Outlay on SCSP/TSP – 2021-22

## ಇಲಾಖೆ : ಕನ್ನಡ ಮತ್ತು ಸಂಸ್ಕೃತಿ – KANNADA & CULTURE

| ಕ್ರ. ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ Scheme & HOA | ನಿಗದಿಪಡಿಸಿದ ಅನುದಾನ Outlay SCSP | TSP | Grand Total SCSP + TSP | ಯೋಜನೆ / ಕಾರ್ಯಕ್ರಮದ ವಿವರ Scheme / Programme Details ಇಲಾಖೆಯ ಪ್ರಸ್ತಾವನೆಗಳು | ನೋಡಲ್ ಏಜೆನ್ಸಿ ಶಿಫಾರಸ್ಸು Recommendations of Nodal Agency | ರಾಜ್ಯ ಪ.ಜಾತಿ / ಪ.ಪಂಗಡ ಅಭಿವೃದ್ಧಿ ಪರಿಷತ್ತಿನ ನಿರ್ಣಯ Decision of the State SC/ST Development Council |
|---|---|---|---|---|---|---|---|
| STATE SECTOR SCHEMES(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ) (ರೂ. ಕೋಟಿಗಳಲ್ಲಿ) | | | | | | | |
| 1. | ಪರಿಶಿಷ್ಟ ಜಾತಿ ಉಪ ಯೋಜನೆ Scheduled Caste Sub Plan (SCSP) (S.S) 2205-00-102-1-44 | 10.00 | 0.00 | 10.00 | 1) ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಧನಸಹಾಯ/ ವಾದ್ಯ ಪರಿಕರ/ ವೇಷಭೂಷಣ ಖರೀದಿಗೆ/ಚಿತ್ರಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕೆ ಧನಸಹಾಯ<br>2) 30 ಜಿಲ್ಲೆಗಳಲ್ಲಿ ಸಂಘ ಸಂಸ್ಥೆಗಳು ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರಾಯೋಜಿಸಿರುವ ಕಲಾ ತಂಡದ ಕಲಾವಿದರಿಗೆ ಪಾವತಿಸುವ ಸಂಭಾವನೆ<br>3) ಯಾವುದೇ ಕಲೆಗಳಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ/ಪ.ಪಂಗಡದ ಯುವ ಕಲಾವಿದರಿಗೆ ಅವರಲ್ಲಿ ನೈಪುಣ್ಯತೆಯನ್ನು ಹೆಚ್ಚಿಸಲು ಪ್ರತಿಷ್ಠಿತ ಸಂಸ್ಥೆಗಳಲ್ಲಿ ತರಬೇತಿಗಾಗಿ ಪ್ರವೇಶ ಕಲ್ಪಿಸಲು ಧನಸಹಾಯ<br>4) ಪ.ಜಾತಿ/ಪ.ಪಂಗಡದ ಜನಪದ ಉತ್ಸವಗಳು (ಜಿಲ್ಲೆಗೆ ರೂ.5.00 ಲಕ್ಷದಂತೆ)<br>5) ಅಂಬೇಡ್ಕರ್ ಓದು : ಕಾಲೇಜು ವಿದ್ಯಾರ್ಥಿಗಳಿಗೆ ಅಂಬೇಡ್ಕರ್‌ರವರ ಬದುಕು ಮತ್ತು ಸಾಧನೆ ಬಗ್ಗೆ ಪರಿಚಯ ಮಾಡಿಕೊಡುವ ಕಾರ್ಯಕ್ರಮ<br>6)ಸಾಮಾಜಿಕ ಅರಿವು ಕಾರ್ಯಕ್ರಮ- ಅಸ್ಪೃಶ್ಯತೆ ನಿವಾರಣೆ ಮತ್ತು ದೌರ್ಜನ್ಯ ತಡೆ ಅಧಿನಿಯಮದ ಬಗ್ಗೆ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ | ಅನುಮೋದಿಸಬಹುದು.<br>1. ಎಸ್‌ಸಿ/ಎಸ್‌ಟಿ ಕಲಾವಿದರ ತಂಡಗಳಿಗೆ ವಾದ್ಯ ಪರಿಕರ, ಬ್ಯಾಂಡ್‌ಸೆಟ್ ಇತ್ಯಾದಿ ಒದಗಿಸಲು ಕ್ರಮವಹಿಸುವುದು.<br>2. ಪ.ಜಾತಿ/ಪ.ಪಂಗಡದ ಅಲೆಮಾರಿ/ಅರೆ ಅಲೆಮಾರಿ ಸಮುದಾಯದ ಕಲಾವಿದರಿಗೆ ಆದ್ಯತೆ ನೀಡುವುದು. | ಅನುಮೋದಿಸಿದೆ. |
| 2. | ಗಿರಿಜನ ಉಪ ಯೋಜನೆ Tribal Sub Plan (S.S) 2205-00-796-0-01 | 0.00 | 3.00 | 3.00 | | | |
| 3. | ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ Unspent SCSP-TSP Amount as per the SCSP-TSP Act 2013 (S.S) 2205-00-800-0-15 | 0.82 | 0.28 | 1.10 | | | |
| | GRAND TOTAL (SS) | 10.82 | 3.28 | 14.10 | | | |

ರಂಗಲಿಂಗಯ್ಯ
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

33. ಕನ್ನಡ ಮತ್ತು ಸಂಸ್ಕೃತಿ ಇಲಾಖೆ

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.10.82 ಕೋಟಿ, ಟಿ.ಎಸ್.ಪಿ- ರೂ.3.28 ಕೋಟಿ ಒಟ್ಟು ರೂ. 14.10 ಕೋಟಿ.

[illegible] ಪ.ಜಾತಿ/ಪ.ಪಂಗಡದ ಜನರಲ್ಲಿ ಹೆಚ್ಚಾಗಿ ವಿವಿಧ ರಂಗಗಳಲ್ಲಿ ಕಲಾವಿದರು ಮತ್ತು ಸಂಘಗಳಿದ್ದು, ಅವರೆಲ್ಲರಿಗೂ ಕಲೆ ಮತ್ತು ಸಂಸ್ಕೃತಿ ಬಗ್ಗೆ ಪ್ರೋತ್ಸಾಹ ನೀಡಲು ಹೆಚ್ಚಿನ ಅನುದಾನ ನೀಡುವುದು ಸೂಕ್ತವೆಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

(ಕ್ರಮ: ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ)

34. ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:-

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.3710.47 ಕೋಟಿ, ಟಿ.ಎಸ್.ಪಿ- ರೂ.1395.79 ಕೋಟಿ ಒಟ್ಟು ರೂ.5106.26 ಕೋಟಿ.

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಗಮಗಳಿಗೆ ಅತ್ಯಂತ ಕಡಿಮೆ ಅನುದಾನ ಒದಗಿಸಲಾಗಿದ್ದು, ಹೆಚ್ಚಿನ ಅನುದಾನ ಒದಗಿಸುವಂತೆ ಹಾಗೂ ಪ್ರಮುಖವಾಗಿ ನೀಡುವಂತೆ ಎಲ್ಲಾ ಸದಸ್ಯರು ಒತ್ತಾಯಿಸಿದರು.

ಸ್ವಯಂ ಉದ್ಯೋಗದಡಿ ವಾಹನಗಳಿಗೆ ಕನಿಷ್ಠ ರೂ.3.00 ಲಕ್ಷದಿಂದ ರೂ.5.00 ಲಕ್ಷದವರೆಗೆ ಸಹಾಯಧನ ನೀಡುವಂತೆ ಶ್ರೀ ನರಸಿಂಹ ನಾಯಕ್ (ರಾಜುಗೌಡ) ಇವರು ಸಲಹೆ ನೀಡಿದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ)

ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ರಾಜ್ಯ ಪರಿಷತ್ತಿನ ಅಧ್ಯಕ್ಷರು ಮಾತನಾಡಿ ಹಿಂದಿನ ವರ್ಷದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಅಡಿಯಲ್ಲಿ ರೂ.24,647 ಕೋಟಿಗಳನ್ನು ವೆಚ್ಚಮಾಡಿ 95% ಪ್ರಗತಿ ಸಾಧಿಸಲಾಗಿದೆ ಪ್ರಸಕ್ತ ಸಾಲಿನಲ್ಲಿ ರೂ.26005 ಕೋಟಿಗಳನ್ನು ಒದಗಿಸಲಾಗಿದೆ ಸರ್ಕಾರ ಯಾವಾಗಲೂ ಪ.ಜಾತಿ/ಪ.ಪಂಗಡದವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ಈ ಬಗ್ಗೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಆದ್ದರಿಂದ, ಎಲ್ಲಾ ಅನುಷ್ಠಾನ ಅಧಿಕಾರಿಗಳು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಅಡಿ ನೀಡಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ವ್ಯಪಗತ ಮಾಡದೇ 100% ಸಾಧನೆಯನ್ನು ಮಾಡಲು ತುರ್ತು ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಿದರು.

ಯಾವುದೇ ಇಲಾಖೆಯ ಅಧಿಕಾರಿಗಳು ಅನುಷ್ಠಾನದಲ್ಲಿ ನಿರ್ಲಕ್ಷ್ಯತೆಯನ್ನು ವಹಿಸಿದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಸರ್ಕಾರದಿಂದ ನೀಡುವ ಎಲ್ಲಾ ಸೌಲಭ್ಯಗಳನ್ನು ಕುಟುಂಬದ ಮುಖ್ಯಸ್ಥರಾದ ಮಹಿಳೆಯರ ಹೆಸರಿಗೆ ಅಥವಾ ಜಂಟಿ ಹೆಸರಿನಲ್ಲಿ (ದಂಪತಿ) ನೀಡುವಂತೆ ಕ್ರಮವಹಿಸಲು ಸೂಚಿಸಿದರು.

ರಾಜ್ಯ ಅಭಿವೃದ್ಧಿ ಪರಿಷತ್‌ನಿಂದ ನೀಡಿರುವ ಸಾಮಾನ್ಯ ಸೂಚನೆಗಳು

1. ರಾಜ್ಯ ಪರಿಷತ್‌ನ ನಿರ್ಣಯಗಳಂತೆ ವಿವಿಧ ಯೋಜನೆಗಳ ಘಟಕ ವೆಚ್ಚ, ಸಹಾಯಧನದ ಮೊತ್ತ ಇತ್ಯಾದಿಗಳ ಬಗ್ಗೆ ಪರಿಷ್ಕರಿಸಬೇಕಾದಲ್ಲಿ ತಕ್ಷಣವೇ ಸರ್ಕಾರಿ ಆದೇಶಗಳನ್ನು ಸಂಬಂಧಿಸಿದ ಇಲಾಖೆಗಳು ಹೊರಡಿಸುವುದು. ಇದರಿಂದ ಅನುಷ್ಠಾನದಲ್ಲಿ ವಿಳಂಬವನ್ನು ತಡೆಗಟ್ಟಬಹುದು.
2. ಯಾವುದೇ ಇಲಾಖೆಗಳಲ್ಲಿ ಅನುದಾನ ಉಳಿಕೆಯಾದಲ್ಲಿ ಅಧ್ಯರ್ಪಣೆ ಮಾಡಲು ಪ್ರಸ್ತಾವನೆಯನ್ನು ಯಾವುದೇ ವಿಳಂಬವಿಲ್ಲದೇ ಆರ್ಥಿಕ ಇಲಾಖೆಗೆ ತ್ವರಿತ ಕಳುಹಿಸತಕ್ಕದ್ದು. ಕಲ್ಯಾಣ ಇಲಾಖೆ ಮತ್ತು ಆರ್ಥಿಕ ಇಲಾಖೆಯ ಗಮನಕ್ಕೆ ತರುವುದು.
3. ಆಯಾ ಇಲಾಖೆಯಡಿ ಒಂದು ಕಾರ್ಯಕ್ರಮದಿಂದ ಇನ್ನೊಂದು ಕಾರ್ಯಕ್ರಮಕ್ಕೆ ಅನುದಾನ ಮರುಹಂಚಿಕೆ ಮಾಡಬೇಕಾದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸುವುದು. (ಡಿಸೆಂಬರ್-2021 ರೊಳಗೆ)
4. ಎಸ್.ಸಿ.ಎಸ್.ಪಿ ಯಿಂದ ಟಿ.ಎಸ್.ಪಿ ಗೆ ಹಾಗೂ ಟಿ.ಎಸ್.ಪಿ ಯಿಂದ ಎಸ್.ಸಿ.ಎಸ್.ಪಿ ಗೆ ಅನುದಾನವನ್ನು ವರ್ಗಾಯಿಸತಕ್ಕದ್ದಲ್ಲ.
5. ಎಲ್ಲಾ ಇಲಾಖೆಗಳು ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡುತ್ತಿರುವ ಬಗ್ಗೆ ಆಯಾ ಇಲಾಖೆಯ ಹಿರಿಯ ಅಧಿಕಾರಿಗಳಿಂದ ಕಡ್ಡಾಯವಾಗಿ ತಪಾಸಣೆ ನಡೆಸಿ ಫಲಾನುಭವಿಗಳಿಗೆ ಸೌಲಭ್ಯ ದೊರೆಯುತ್ತಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು. ಈ ಬಗ್ಗೆ ಕಾಲಕಾಲಕ್ಕೆ ವರದಿಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸುವುದು.
6. ಎಲ್ಲಾ ಇಲಾಖೆಗಳು ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾರ್ಯಕ್ರಮಗಳ ಅನುಷ್ಠಾನದ ಪರಿಣಾಮದ ಬಗ್ಗೆ ಮೌಲ್ಯಮಾಪನ ಮಾಡಿ ವರದಿಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸುವುದು.
7. ಅಧಿನಿಯಮ 2013 ಮತ್ತು ನಿಯಮಗಳು, 2017 ರಂತೆ ಆಯಾ ಇಲಾಖೆಗಳಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಅಧಿಕಾರಿ ನೇಮಕ ಮತ್ತು ಉಪ ಹಂಚಿಕೆ ನೆರವು ಕೋಶಗಳನ್ನು ಸ್ಥಾಪಿಸಲು ಕ್ರಮವಹಿಸುವುದು.
8. ಎಲ್ಲಾ ಇಲಾಖೆಗಳಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳ ಅನುಷ್ಠಾನ ಅಧಿಕಾರಿಗಳಿಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕಾರ್ಯಾಗಾರಗಳನ್ನು ಏರ್ಪಡಿಸಿ ಪರಿಣಿತರಿಂದ ಅರಿವು ಮೂಡಿಸುವುದು.

9. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಮತ್ತು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಾಗ ತಪ್ಪದೇ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾಯ್ದೆ ಮತ್ತು ನಿಯಮಗಳನ್ನು ಪಾಲಿಸಲು ಕ್ರಮವಹಿಸುವುದು.

10. ಪ.ಜಾತಿ/ಪ.ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಗ್ರಾಮ/ತಾಲ್ಲೂಕು/ವಿಧಾನ ಸಭಾ ಕ್ಷೇತ್ರ/ಜಿಲ್ಲೆಗಳಿಗೆ ಅನುದಾನ ಹಂಚಿಕೆ ಮಾಡುವುದು.

(ಕ್ರಮ ಎಲ್ಲಾ ಇಲಾಖೆಯ ಅನುಷ್ಠಾನ ಅಧಿಕಾರಿಗಳು)

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿಗಳು ಹಾಗೂ ಅಧ್ಯಕ್ಷರು,
ರಾಜ್ಯ ಅನುಸೂಚಿತ
ಜಾತಿಗಳು/ಅನುಸೂಚಿತ ಪಂಗಡಗಳ
ಅಭಿವೃದ್ಧಿ ಪರಿಷತ್ತು

ದಿನಾಂಕ: 02.07.2021 ರಂದು ನಡೆದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ

| ಕ್ರ ಸಂ | ಹೆಸರು | ಪದನಾಮ |
|---|---|---|
| 1. | ಶ್ರೀ ರಜನೀಶ್ ಗೋಯಲ್, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ |
| 2. | ಶ್ರೀ ಬಿ.ಹೆಚ್. ಅನಿಲ್ ಕುಮಾರ್, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ |
| 3. | ಡಾ. ಜಿ. ಕಲ್ಪನಾ, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಕಾರ್ಮಿಕ ಇಲಾಖೆ |
| 4. | ಡಾ. ರಾಜಕುಮಾರ್ ಖತ್ರಿ, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೃಷಿ ಇಲಾಖೆ |
| 5. | ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಮತ್ತು ಭಾರೀ ನೀರಾವರಿ ಇಲಾಖೆ |
| 6. | ಶ್ರೀ ಜಿ. ಕುಮಾರ್ ನಾಯಕ್, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆ |
| 7. | ಶ್ರೀ ತುಷಾರ್ ಗಿರಿನಾಥ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ |
| 8. | ಶ್ರೀ ಟಿ.ಕೆ ಅನಿಲ್ ಕುಮಾರ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ |
| 9. | ಶ್ರೀ ಅಂಜುಂ ಪರ್ವೇಜ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಾರ್ತಾ |

| ಕ್ರ ಸಂ | ಹೆಸರು | ಪದನಾಮ |
|---|---|---|
| | | ಇಲಾಖೆ |
| 10. | ಡಾ. ಎಸ್. ಸೆಲ್ವ ಕುಮಾರ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಕೌಶಲ್ಯಾಭಿವೃದ್ಧಿ ಇಲಾಖೆ |
| 11. | ಶ್ರೀ ಎಸ್.ಆರ್. ಉಮಾ ಶಂಕರ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) |
| 12. | ಶ್ರೀ ಎನ್. ಮಂಜುನಾಥ ಪ್ರಸಾದ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಕಂದಾಯ ಇಲಾಖೆ |
| 13. | ಶ್ರೀ ಎಲ್.ಕೆ. ಅತೀಕ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಗ್ರಾಮೀಣಾಭಿವೃದ್ಧಿ ಪಂಚಾಯತ್ ಇಲಾಖೆ |
| 14. | ಕ್ಯಾಪ್ಟನ್.ಪಿ. ಮಣಿವಣ್ಣನ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ |
| 15. | ಶ್ರೀಮತಿ ವಿ.ರಶ್ಮಿ ಮಹೇಶ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |
| 16. | ಶ್ರೀ ಪಂಕಜ್ ಕುಮಾರ್ ಪಾಂಡೆ, ಭಾ.ಆ.ಸೇ. | ಸರ್ಕಾರದ ಕಾರ್ಯದರ್ಶಿ,<br>ಸಣ್ಣ ಕೈಗಾರಿಕೆ, ಕೈಮಗ್ಗ ಮತ್ತು ಜವಳಿ ಇಲಾಖೆ<br>ಹಾಗೂ ಪ್ರವಾಸೋದ್ಯಮ ಇಲಾಖೆ |
| 17. | ಶ್ರೀ ಮನೋಜ್ ಕುಮಾರ್ ಮೀನಾ,<br>ಭಾ.ಆ.ಸೇ. | ಸರ್ಕಾರದ ಕಾರ್ಯದರ್ಶಿ,<br>ವಸತಿ ಇಲಾಖೆ |
| 18. | ಡಾ. ಜಿ. ರವಿಶಂಕರ್, ಭಾ.ಆ.ಸೇ. | ಸರ್ಕಾರದ ಕಾರ್ಯದರ್ಶಿ,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 19. | ಶ್ರೀ ಸಿ. ಮೃತ್ಯುಂಜಯ ಸ್ವಾಮಿ | ಸರ್ಕಾರದ ಕಾರ್ಯದರ್ಶಿ,<br>ಸಣ್ಣ ನೀರಾವರಿ ಇಲಾಖೆ |
| 20. | ಡಾ. ರವಿಕುಮಾರ್ ಸುರಪುರ, ಭಾ.ಆ.ಸೇ. | ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ ಹಾಗೂ<br>ಸಂಚಾಲಕರು, ಎಸ್.ಸಿ.ಎಸ್.ಪಿ. ನೋಡಲ್ ಏಜೆನ್ಸಿ |
| 21. | ಶ್ರೀ ಆರ್.ಕೆ. ಸಿಂಗ್,<br>ಪಿ.ಸಿ.ಸಿ.ಎಫ್. (ಅಭಿವೃದ್ಧಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,<br>ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ,<br>ಇವರ ಪರವಾಗಿ |
| 22. | ಶ್ರೀಮತಿ ಬಿ. ಫೌಜಿಯಾ ತರನ್ನುಂ, ಭಾ.ಆ.ಸೇ.<br>ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ತೋಟಗಾರಿಕೆ ಇಲಾಖೆ, ಇವರ ಪರವಾಗಿ |
| 23. | ಶ್ರೀ ಆರ್.ಎಸ್. ಪೆದ್ದಪ್ಪಯ್ಯ, ಭಾ.ಆ.ಸೇ.<br>ಆಯುಕ್ತರು,ರೇಷ್ಮೆ ಇಲಾಖೆ | ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ರೇಷ್ಮೆ ಇಲಾಖೆ, ಇವರ ಪರವಾಗಿ |
| 24. | ಶ್ರೀಮತಿ ಪುಷ್ಪಲತಾ. ಹೆಚ್.<br>ಪ್ರಧಾನ ವ್ಯವಸ್ಥಾಪಕರು. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,<br>ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ<br>ಮತ್ತು ತಂತ್ರಜ್ಞಾನ ಇಲಾಖೆ, ಇವರ ಪರವಾಗಿ |
| 25. | ಶ್ರೀ ಪಿ.ಎಸ್. ಕಾಂತರಾಜು, ಕೆ.ಆ.ಸೇ. | ನಿರ್ದೇಶಕರು,<br>ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಹಾಗೂ<br>ಸಂಚಾಲಕರು ಟಿ.ಎಸ್.ಪಿ. ನೋಡಲ್ ಏಜೆನ್ಸಿ |

2021-22ನೇ ಸಾಲಿನ SCSP / TSP ಕಾರ್ಯಕ್ರಮಗಳ ಕ್ರಿಯಾ ಯೋಜನೆ ಅನುಬಂಧ - 1

Scheme-wise Outlay on SCSP/TSP –**2021-22**

ಇಲಾಖೆ : ಕನ್ನಡ ಮತ್ತು ಸಂಸ್ಕೃತಿ -KANNADA & CULTURE

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ Scheme & HOA | ನಿಗದಿಪಡಿಸಿದ ಅನುದಾನ Outlay | | | ಯೋಜನೆ / ಕಾರ್ಯಕ್ರಮದ ವಿವರ Scheme / Programme Details ಇಲಾಖೆಯ ಪ್ರಸ್ತಾವನೆಗಳು | ನೋಡಲ್ ಏಜೆನ್ಸಿ ಶಿಫಾರಸ್ಸು Recommendations of Nodal Agency | ರಾಜ್ಯ ಪ.ಜಾತಿ / ಪ.ಪಂಗಡ ಅಭಿವೃದ್ಧಿ ಪರಿಷತ್ತಿನ ನಿರ್ಣಯ Decision of the State SC/ST Development Council |
|---|---|---|---|---|---|---|---|
| | | **SCSP** | **TSP** | **Grand Total SCSP + TSP** | | | |
| STATE SECTOR SCHEMES(ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ) (ರೂ. ಕೋಟಿಗಳಲ್ಲಿ) | | | | | | | |
| 1. | ಪರಿಶಿಷ್ಟ ಜಾತಿ ಉಪ ಯೋಜನೆ<br>Scheduled Caste Sub Plan (SCSP) (S.S)<br>2205-00-102-1-44 | 10.00 | 0.00 | 10.00 | 1) ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಧನಸಹಾಯ/ ವಾದ್ಯ ಪರಿಕರ/ ವೇಷಭೂಷಣ ಖರೀದಿಗೆ/ಚಿತ್ರಶಿಲ್ಪಾ ಕಲಾಕೃತಿಗಳ ಪ್ರದರ್ಶನಕ್ಕೆ ಧನಸಹಾಯ<br>2) 30 ಜಿಲ್ಲೆಗಳಲ್ಲಿ ಸಂಘ ಸಂಸ್ಥೆಗಳು ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರಾಯೋಜಿಸಿರುವ ಕಲಾ ತಂಡದ ಕಲಾವಿದರಿಗೆ ಪಾವತಿಸುವ ಸಂಭಾವನೆ<br>3) ಯಾವುದೇ ಕಲೆಗಳಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ/ಪ.ಪಂಗಡದ ಯುವ ಕಲಾವಿದರಿಗೆ ಅವರಲ್ಲಿ ನೈಪುಣ್ಯತೆಯನ್ನು ಹೆಚ್ಚಿಸಲು ಪ್ರತಿಷ್ಠಿತ ಸಂಸ್ಥೆಗಳಲ್ಲಿ ತರಬೇತಿಗಾಗಿ ಪ್ರವೇಶ ಕಲ್ಪಿಸಲು ಧನಸಹಾಯ<br>4) ಪ.ಜಾತಿ/ಪ.ಪಂಗಡ ಜನಪರ ಉತ್ಸವಗಳು (ಜಿಲ್ಲೆಗೆ ರೂ.5.00 ಲಕ್ಷದಂತೆ)<br>5) **ಅಂಬೇಡ್ಕರ್ ಓದು** : ಕಾಲೇಜು ವಿದ್ಯಾರ್ಥಿಗಳಿಗೆ ಅಂಬೇಡ್ಕರ್‌ರವರ ಬದುಕು ಮತ್ತು ಸಾಧನೆ ಬಗ್ಗೆ ಪರಿಚಯ ಮಾಡಿಕೊಡುವ ಕಾರ್ಯಕ್ರಮ<br>6)ಸಾಮಾಜಿಕ ಅರಿವು ಕಾರ್ಯಕ್ರಮ- ಅಸ್ಪೃಶ್ಯತೆ ನಿವಾರಣೆ ಮತ್ತು ದೌರ್ಜನ್ಯ ತಡೆ ಅಧಿನಿಯಮದ ಬಗ್ಗೆ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ | ಅನುಮೋದಿಸಬಹುದು.<br>1. ಎಸ್.ಸಿ/ಎಸ್.ಟಿ ಕಲಾವಿದರ ತಂಡಗಳಿಗೆ ವಾದ್ಯ ಪರಿಕರ, ಬ್ಯಾಂಡ್‌ಸೆಟ್ ಇತ್ಯಾದಿ ಒದಗಿಸಲು ಕ್ರಮವಹಿಸುವುದು.<br>2. ಪ.ಜಾತಿ/ಪ.ಪಂಗಡದ ಅಲೆಮಾರಿ/ಅರೆ ಅಲೆಮಾರಿ ಸಮುದಾಯದ ಕಲಾವಿದರಿಗೆ ಆದ್ಯತೆ ನೀಡುವುದು. | ಅನುಮೋದಿಸಿದೆ. |
| 2. | ಗಿರಿಜನ ಉಪ ಯೋಜನೆ<br>Tribal Sub Plan (S.S)<br>2205-00-796-0-01 | 0.00 | 3.00 | 3.00 | | | |
| 3. | ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ<br>Unspent SCSP-TSP Amount as per the SCSP-TSP Act 2013 (S.S)<br>2205-00-800-0-15 | 0.82 | 0.28 | 1.10 | | | |
| | **GRAND TOTAL (SS)** | **10.82** | **3.28** | **14.10** | | | |

ಶಂಭುಲಿಂಗಯ್ಯ
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560002

ದೂರವಾಣಿ-080-22213530/22241325 ಫ್ಯಾಕ್ಸ್ : 080-22214379 ಇ-ಮೇಲ್ kanhaybir@gmail.com ವೆಬ್ ಸೈಟ್ - www.kannadasi[illegible]

ಡಿಕೆಸಿ/27011/86/2021

ದಿನಾಂಕ:09.08.2021

ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ವಿಕಾಸಸೌಧ, ಬೆಂಗಳೂರು,

ಮಾನ್ಯರೆ,

ವಿಷಯ : 2020-21ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯ ಕ್ರಿಯಾ ಯೋಜನೆಗೆ ಸಂಬಂಧಿಸಿದಂತೆ

ಉಲ್ಲೇಖ : 1. ನೋಡಲ್ ಏಜೆನ್ಸಿ ಸಭೆ ದಿನಾಂಕ.11.06.2021.
2. ರಾಜ್ಯ ಪರಿಷತ್ ಸಭಾ ನಡವಳಿ ದಿನಾಂಕ:02.07.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 2021 [illegible] ಸಾಲಿನ ಆಯವ್ಯಯದಲ್ಲಿ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಹಂಚಿಕೆಯಾದ [illegible] ಹಮ್ಮಿಕೊಳ್ಳಬಹುದಾದ 12 ಯೋಜನೆಗಳಿಗೆ ಅನುದಾನ ನಿಗದಿಪಡಿಸಿ, ದಿನಾಂಕ:11.06.2021ರಂದು [illegible] ಸಮಾಜ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ನೋಡಲ್ ಏಜೆನ್ಸಿ ಸಭೆಯಲ್ಲಿ [illegible] (ಪ್ರತಿ ಲಗತ್ತಿಸಿದೆ)

ಮುಂದುವರೆದು, ದಿನಾಂಕ:02.07.2021 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಇಲಾಖೆಯಿಂದ ರೂಪಿಸಲಾದ [illegible] ಯೋಜನೆಗಳಲ್ಲಿ ಈ ಕೆಳಕಂಡ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

1. ಧನಸಹಾಯ
2. [illegible]
3. ಸ್ವಚ್ಛತೆ ಹೆಚ್ಚಿಸಲು ಪ್ರೋತ್ಸಾಹ
4. ಜನಪದ ಗಿರಿಜನ ಉತ್ಸವ
5. ಡಾ ಬಿ ಆರ್ ಅಂಬೇಡ್ಕರ್ ಓದು
6. [illegible]

ದಿನಾಂಕ:[illegible] ರಂದು ಮಾನ್ಯ [illegible] ರಾಜ್ಯ ಅಭಿವೃದ್ಧಿ ಪರಿಷತ್ ಅನುಮೋದನೆ ನೀಡಿರುವ [illegible] ಯೋಜನೆಗಳ ಬಗ್ಗೆ ಚರ್ಚಿಸಲಾಯಿತು.

1. ಗುರುಶಿಷ್ಯ ಪರಂಪರೆ
2. ಕನ್ನಡ ಪಿ ಹೆಚ್ ಡಿ. ಮತ್ತು ಎಂ ಫಿಲ್ [illegible]
3. [illegible] ಸಂಗೀತ ಮತ್ತು [illegible] ಕಲಾವಿದರಿಗೆ ಪ್ರೋತ್ಸಾಹ
4. [illegible] ವಿಮರ್ಶೆ ಮತ್ತು [illegible]
5. ಯಕ್ಷಗಾನಕ್ಕೆ ಸಂಬಂಧಿಸಿದ ಕಲಾ ತರಬೇತಿ [illegible]
6. ಜಾನಪದ [illegible]
7. [illegible]

ಕೈಬಿಡಲಾದ ಯೋಜನೆಗಳಲ್ಲಿ ಸೇರ್ಪಡೆಗೊಳಿಸಬೇಕಾದ ಯೋಜನೆಗಳಿಗೆ ಸ್ಪಷ್ಟವಿವರಣೆಯೊಂದಿಗೆ ಮರುಪ್ರಸ್ತಾವನೆ ಸಲ್ಲಿಸಲು ತಿಳಿಸಿರುತ್ತಾರೆ. ಅದರಂತೆ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳಿಸಬೇಕಾದ ವಿವರ ಕೆಳಕಂಡಂತಿದೆ.

1. ಗುರುಶಿಷ್ಯ ಪರಂಪರೆ:

ಸದರಿ ಯೋಜನೆಯನ್ನು ಜಿಲ್ಲಾ ಕಚೇರಿಗಳ ಮೂಲಕ ಅನುಷ್ಠಾನ ಮಾಡಲಾಗುವುದು.

ಗುರುಶಿಷ್ಯ ಪಂಪರೆಯು ಇಲಾಖೆಯ ನಿರಂತರ ಯೋಜನೆಯಾಗಿದ್ದು, ಆಯಾ ಜಿಲ್ಲೆಗಳಲ್ಲಿ ನಶಿಸಿ ಹೋಗುತ್ತಿರುವ ಕಲಾ ಪ್ರಕಾರವನ್ನು ಆಯ್ಕೆ ಮಾಡಿ ಆ ಕಲಾಪ್ರಕಾರದ ತಜ್ಞರಿಂದ ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗುತ್ತದೆ. ಈ ಮೂಲಕ ನಶಿಸಿಹೋಗುತ್ತಿರುವ ಕಲೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಆದ್ದರಿಂದ ಸದರಿ ಯೋಜನೆಗೆ ಇಲಾಖೆಗೆ ನೀಡಿರುವ ಅನುದಾನದಲ್ಲಿಯೇ ಅನುದಾನ ಕಲ್ಪಿಸಿಕೊಳ್ಳಲಾಗುವುದರಿಂದ ಸದರಿ ಯೋಜನೆಯ ಅನುಷ್ಠಾನಕ್ಕೆ ಅನುಮತಿ ನೀಡಬೇಕೆಂದು ಕೋರಿದೆ.

2. ಕಥೆ ಕವನ, ವಿಮರ್ಶೆ ಮತ್ತು ಕರಡು ತಿದ್ದುಪಡಿ ಕಮ್ಮಟ ಮತ್ತು ಸ್ಪರ್ಧೆಗಳನ್ನು ಏರ್ಪಡಿಸುವುದು:

ಸದರಿ ಯೋಜನೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೂಲಕ ಅನುಷ್ಠಾನ ಮಾಡಲಾಗುವುದು. ಕನ್ನಡ ಸಾಹಿತ್ಯ ಲೋಕದಲ್ಲಿ ಸಾಹಿತ್ಯ ಕೃಷಿ ಮಾಡುತ್ತಿರುವ ಬರಹಗಾರರು/ವಿಮರ್ಶಕರು/ಸಾಹಿತಿಗಳಲ್ಲಿ ಅತ್ಯಂತ ವಿರಳ ಸಂಖ್ಯೆಯಲ್ಲಿರುವ ಹಾಗೂ ಸಾಹಿತ್ಯ ಲೋಕಕ್ಕೆ ಪರಿಚಯಿಸಿಕೊಂಡಿರದೆ ಇರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದವರಿಗೆ ಕಥೆ, ಕವನ, ವಿಮರ್ಶೆ, ಕಾದಂಬರಿ, ಪ್ರವಾಸ ಕಥನ ಇತ್ಯಾದಿ ಸಾಹಿತ್ಯ ರಚನೆಯ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸುವ ಮುಖಾಂತರ ಅಂತಹವರನ್ನು ಗುರುತಿಸಿ ಸಮಾಜ ಮುಖ್ಯವಾಹಿನಿಗೆ ಪರಿಚಯಿಸುವುದರೊಂದಿಗೆ ಅವರಿಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತರಬೇತಿ ನೀಡಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳಲು ಆ ಮುಖಾಂತರ ಉತ್ಕೃಷ್ಟ ಸಾಹಿತ್ಯ ರಚನೆ ಮಾಡಲು ಪ್ರೇರೇಪಿಸುವುದು ಹಾಗೂ ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಹಾಗೂ ಅಭಿರುಚಿಯನ್ನು ಮೂಡಿಸುವುದು ಸದರಿ ಯೋಜನೆಯ ಉದ್ದೇಶವಾಗಿರುತ್ತದೆ. ಈ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಬರುವಂತೆ ಮಾಡುವುದು ಪ್ರಮುಖ ಉದ್ದೇಶವಾಗಿರುತ್ತದೆ.

ಆದ್ದರಿಂದ ಸದರಿ ಯೋಜನೆಗೆ ಇಲಾಖೆಗೆ ನೀಡಿರುವ ಅನುದಾನದಲ್ಲಿಯೇ ಅನುದಾನ ಕಲ್ಪಿಸಿಕೊಳ್ಳಲಾಗುವುದರಿಂದ ಸದರಿ ಯೋಜನೆಯ ಅನುಷ್ಠಾನಕ್ಕೆ ಅನುಮತಿ ನೀಡಬೇಕೆಂದು ಕೋರಿದೆ.

3. ಯಕ್ಷಗಾನಕ್ಕೆ ಸಂಬಂಧಿಸಿದ ಕಲಾ ತರಬೇತಿ/ಕಮ್ಮಟಗಳು:

ಸದರಿ ಯೋಜನೆಯನ್ನು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಮೂಲಕ ಅನುಷ್ಠಾನ ಮಾಡಲಾಗುವುದು. ಯಕ್ಷಗಾನವು ನೃತ್ಯ, ಹಾಡುಗಾರಿಕೆ, ಮಾತುಗಾರಿಕೆ, ವೇಷಭೂಷಣಗಳನ್ನೊಳಗೊಂಡ ಒಂದು ಸ್ವತಂತ್ರವಾದ ಶಾಸ್ತ್ರೀಯ ಕಲೆ. ಕರ್ನಾಟಕ ಸಾಂಪ್ರದಾಯಿ ಕಲಾಪ್ರಕಾರಗಳಲ್ಲಿ ಪ್ರಮುಖವಾದ ಒಂದು ಕಲೆಯಾಗಿದ್ದು, ಕರಾವಳಿ ಕರ್ನಾಟಕ ಭಾಗದಲ್ಲಿ ಅತ್ಯಂತ ಪ್ರಸಿದ್ಧವಾಗಿರುತ್ತದೆ. ಒಂದು ಸೀಮಿತ ಪ್ರದೇಶ ಹಾಗೂ ಜನಾಂಗಕ್ಕೆ ಮಾತ್ರ ಮೀಸಲಾಗಿರುವ ಸದರಿ ಕಲೆಯು ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದವರು ಈ ಕಲಾಪ್ರಕಾರದಲ್ಲಿ ಅತ್ಯಂತ ವಿರಳ ಸಂಖ್ಯೆಯಲ್ಲಿರುತ್ತಾರೆ. ಈ ಹಿನ್ನಲೆಯಲ್ಲಿ ಸದರಿ ಕಲಾಪ್ರಕಾರದಲ್ಲಿ ಈ ಸಮುದಾಯದವರಿಗೆ ತರಬೇತಿ/ಕಮ್ಮಟಗಳನ್ನು ಏರ್ಪಡಿಸುವ ಮೂಲಕ ಹೆಚ್ಚಿನ ಕಲಾವಿದರನ್ನು ಯಕ್ಷಗಾನ ಕಲಾಪ್ರಕಾರ ಕ್ಷೇತ್ರಕ್ಕೆ ಪರಿಚಯಿಸುವುದು ಹಾಗೂ ಒಂದು ಸೀಮಿತ ಪ್ರದೇಶಕ್ಕೆ ಮೀಸಲಾಗಿರುವ ಯಕ್ಷಗಾನ ಕಲೆಯನ್ನು ಕರ್ನಾಟಕದ ಇತರೆ ಭಾಗಕ್ಕೂ ಪರಿಚಯಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ.

ಆದ್ದರಿಂದ ಸದರಿ ಯೋಜನೆಗೆ ಇಲಾಖೆಗೆ ನೀಡಿರುವ ಅನುದಾನದಲ್ಲಿಯೇ ಅನುದಾನ ಕಲ್ಪಿಸಿಕೊಳ್ಳಲಾಗುವುದರಿಂದ ಸದರಿ ಯೋಜನೆಯ ಅನುಷ್ಠಾನಕ್ಕೆ ಅನುಮತಿ ನೀಡಬೇಕೆಂದು ಕೋರಿದೆ.

4. ಜಾನಪದ ಕಲೆಗೆ ಸಂಬಂಧಿಸಿದ ಕಲಾ ತರಬೇತಿ/ ಕಮ್ಮಟಗಳು

ಸದರಿ ಯೋಜನೆಯನ್ನು ಕರ್ನಾಟಕ ಜಾನಪದ ಅಕಾಡೆಮಿ ಮುಖಾಂತರ ಏರ್ಪಡಿಸಲಾಗುವುದು.

ಪ್ರಾಚೀನ ಕಾಲದಿಂದ ಗ್ರಾಮೀಣ ಭಾಗದ ಜನರ ದೈನಂದಿನ ಚಟುವಟಿಕೆಗಳ ರೂಪದಲ್ಲಿ ಮೂಡಿ ಬರುತ್ತಿದ್ದ ಜನಪದ ಕಲಾಪ್ರಕಾರಗಳು ಇಂದಿನ ಆಧುನಿಕ ಜಗತ್ತಿನಲ್ಲಿ ಕಣ್ಮರೆಯಾಗುತ್ತಿವೆ. ಅಲ್ಲದೆ ಜಾನಪದ ಕಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲಾವಿದರು ಕಲಾ ಕಣಜಗಳಾಗಿದ್ದರೂ ಕೂಡ ಇತ್ತೀಚಿನ ದಿನಗಳಲ್ಲಿ ಆ ಕಲೆಗಳಲ್ಲಿ ಆಸಕ್ತಿ ಕಳೆದುಕೊಂಡಿದ್ದು, ಇಂದಿನ ಆಧುನಿಕ ಕಲೆಗಳ ಭರಾಟೆಯಲ್ಲಿ ನಿಧಾನಗತಿಯಲ್ಲಿ ಯುವಪೀಳಿಗೆಯಲ್ಲಿ ಜನಪದ ಕಲೆಗಳು ಮರೆಯಾಗಿ ಬರುತ್ತಿವೆ. ಆದ್ದರಿಂದ ಈಗಿನ ಯುವ ಪೀಳಿಗೆಗೆ ಜಾನಪದ ಕಲೆಗಳಲ್ಲಿ ಆಸಕ್ತಿ ಮತ್ತು ಅಭಿರುಚಿ ಮೂಡಿಸಲು ಕಲಾ ತರಬೇತಿ/ ಕಮ್ಮಟಗಳನ್ನು ಏರ್ಪಡಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ.

ಆದ್ದರಿಂದ ಸದರಿ ಯೋಜನೆಗೆ ಇಲಾಖೆಗೆ ನೀಡಿರುವ ಅನುದಾನದಲ್ಲಿಯೇ ಅನುದಾನ ಕಲ್ಪಿಸಿಕೊಳ್ಳಲಾಗುವುದರಿಂದ ಸದರಿ ಯೋಜನೆಯ ಅನುಷ್ಠಾನಕ್ಕೆ ಅನುಮತಿ ನೀಡಬೇಕೆಂದು ಕೋರಿದೆ.

5. ಪುಸ್ತಕ ಪ್ರಕಾಶನಕ್ಕೆ ಸಂಬಂಧಿಸಿದಂತೆ ಕಮ್ಮಟ/ ತರಬೇತಿ:

ಸದರಿ ಯೋಜನೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಅನುಷ್ಠಾನಗೊಳಿಸಲಾಗುವುದು. ಈ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದವರನ್ನು ಹೊರತುಪಡಿಸಿ ಇತರೆ ಸಮುದಾಯದವರೇ ಪುಸ್ತಕ ಮುದ್ರಣ/ವ್ಯಾಪಾರ ವಹಿವಾಟಿನಲ್ಲಿ ಕನ್ನಡ ಸಾಹಿತ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರು ಈ ಕ್ಷೇತ್ರದ ಸೇವೆಯಲ್ಲಿ ಅತ್ಯಂತ ವಿರಳ ಸಂಖ್ಯೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಈ ಕ್ಷೇತ್ರವು ಪುಸ್ತಕೋದ್ಯಮವಾಗಿದ್ದು, ಪುಸ್ತಕ ಪ್ರಕಾಶನ, ಪುಸ್ತಕ ಮುದ್ರಣ, ಕೃತಿ ಸ್ವಾಮ್ಯ ನೀತಿ (ಕಾಪಿ ರೈಟ್ಸ್), ಡಿಟಿಪಿ ಮತ್ತು ಮಾರಾಟ ಮುಂತಾದ ಕೌಶಲ್ಯಗಳನ್ನು ಕಲಿಸಿಕೊಡುವ ಯೋಜನೆಯಾಗಿದ್ದು, ಸದರಿ ಯೋಜನೆಗೆ ಸಂಬಂಧಿಸಿದಂತೆ ಕಲಿಕಾ ಕೌಶಲ್ಯ ತರಬೇತಿ/ ಕಮ್ಮಟಗಳನ್ನು ಏರ್ಪಡಿಸುವ ಮೂಲಕ ಹೊಸ ಪ್ರತಿಭೆಗಳನ್ನು ಹುಟ್ಟು ಹಾಕುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ.

ಆದ್ದರಿಂದ ಸದರಿ ಯೋಜನೆಗೆ ಇಲಾಖೆಗೆ ನೀಡಿರುವ ಅನುದಾನದಲ್ಲಿಯೇ ಅನುದಾನ ಕಲ್ಪಿಸಿಕೊಳ್ಳಲಾಗುವುದರಿಂದ ಸದರಿ ಯೋಜನೆಯ ಅನುಷ್ಠಾನಕ್ಕೆ ಅನುಮತಿ ನೀಡಬೇಕೆಂದು ಕೋರಿದೆ.

ಮೇಲ್ಕಂಡ ಯೋಜನೆಗಳು ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದವರಿಗೆ ಸಾಹಿತ್ಯ ಕೃಷಿ ಮಾಡಲು, ಕಲೆಗಳಲ್ಲಿ ಅಭಿರುಚಿ ಮತ್ತು ಆಸಕ್ತಿ ಮೂಡಿಸುವುದರ ಜೊತೆಗೆ ಪುಸ್ತಕೋದ್ಯಮದಲ್ಲಿ ಪ್ರಕಾಶಕರಾಗಿ ಕೂಡ ಬರಲು ಸದರಿ ಯೋಜನೆಗಳು ಅನುಕೂಲವಾಗುವ ಹಿನ್ನೆಲೆಯಲ್ಲಿ 5 ಯೋಜನೆಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳಿಸಲು ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸಿಕೊಡಲು ಕೋರಿದೆ

ನಿರ್ದೇಶಕರಿಂದ ಕರಡು ಅನುಮೋದನೆಗೊಂಡಿದೆ

ತಮ್ಮ ವಿಶ್ವಾಸಿ

ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.

ಪ್ರತಿ

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ
2. ನಿರ್ದೇಶಕರು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕೋಶ, ಸಮಾಜ ಕಲ್ಯಾಣ ಇಲಾಖೆ [illegible] ಯವನಿಕ ಆವರಣ, ನೃಪತುಂಗ ರಸ್ತೆ, ಬೆಂಗಳೂರು-560 001
3. ಕಡತಕ್ಕೆ.